ಬೇರೆ ಮನೆಗಳನ್ನು ಕಟ್ಟಿಸಿಕೊಡಿ ಎಂದು ಹೇಳಿದರೆ ಲಕ್ಷಾಂತರ ರೂಪಾಯಿಗಳು ಬೇಕಾಗುತ್ತದೆ. ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುವುದಿಲ್ಲ. ತಾವು ನಮಗೆ ಭೂಮಿಯನ್ನು ಪುಕ್ಕಟೆಯಾಗಿ ಕೊಡಿಸಿ, ನಿಮಗೆ ನಾವು ಬಸ್ ನಿಲ್ದಾಣವನ್ನು ಕಟ್ಟಿಸಿ ಕೊಡುತ್ತೇವೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ತಾವು ಲ್ಯಾಂಡ್ ವ್ಯಾಲ್ಯೂಯೇಷನ್ ಕೊಡುವಂತಹ ಆಲೋಚನೆಯನ್ನು ಮಾಡಿದರೆ ಅನುಕೂಲವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಲ್ಯಾಂಡ್ ವ್ಯಾಲ್ಯುಯೇಷನ್ ಕೊಡುತ್ತೇವೆ, ತಾವು ಕಡಿಮೆ ದರದಲ್ಲಿ ಕೊಡಿಸಿದರೆ ನಾವು ಕೊಡುತ್ತೇವೆ. ತಾವು ಉಚಿತವಾಗಿ ಕೊಡಿಸಬೇಕು. ಇಲ್ಲದಿದ್ದರೆ ಕಷ್ಟವಾಗುತ್ತದೆ. ಆಯಿತು, ನಾವು ನೀವು ಮಾತನಾಡಿ ಮಾಡೋಣ.

ಗುಬ್ಬಿ ಕ್ಷೇತ್ರದ ಕೆ.ಜಿ.ಟೆಂಪಲ್, ಮಾವಿನಹಳ್ಳಿ, ಕಲ್ಲೂರು ಕ್ರಾಸ್ ಮತ್ತು ನಿಟ್ಟೂರು ಗ್ರಾಮಗಳಲ್ಲಿ ಉಪ ಮಾರುಕಟ್ಟೆಯ ಮಂಜೂರಾತಿ.

54(35) ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) :— ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗುಬ್ಬಿ ಕ್ಷೇತ್ರದ ಕೆ.ಜಿ. ಟೆಂಪಲ್, ಮಾವಿನಹಳ್ಳಿ, ಕಲ್ಲೂರು ಕ್ರಾಸ್ ಮತ್ತು ನಿಟ್ಟೂರ್ ಗ್ರಾಮಗಳಲ್ಲಿ, ಉಪ ಗ್ರಾಮಗಳಲ್ಲಿ ಉಪ ಮಾರುಕಟ್ಟೆಗಳನ್ನು ಮಂಜೂರು ಮಾಡಬೇಕೆಂದು 3-4 ವರ್ಷಗಳಿಂದ ಸರ್ಕಾರವನ್ನು ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :—

ಅ) ಕೆ.ಜಿ. ಟೆಂಪಲ್ ಮತ್ತು ನಿಟ್ಟೂರುಗಳಲ್ಲಿ ಈಗಾಗಲೇ ಉಪ ಮಾರುಕಟ್ಟೆಗಳನ್ನು ಸ್ಥಾಪನೆ ಮಾಡಲಾಗಿದೆ. ಮತ್ತು ಅಭಿವೃದ್ಧಿಪಡಿಸಲಾಗುತ್ತಿದೆ. ಕಲ್ಲೂರು ಕ್ರಾಸ್‌ನಲ್ಲಿ ಗ್ರಾಮೀಣ ಮಾರುಕಟ್ಟೆಯನ್ನು (ಸಂತೆ) ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗಿದೆ. ಮಾವಿನಹಳ್ಳಿ ಗ್ರಾಮದಲ್ಲಿ ಉಪ ಮಾರುಕಟ್ಟೆ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲ.

ಆ) ಮಾವಿನಹಳ್ಳಿ ಗ್ರಾಮದಲ್ಲಿ ಉಪ ಮಾರುಕಟ್ಟೆ ಸ್ಥಾಪಿಸಲು ಪ್ರಸ್ತಾಪ ಬಂದಲ್ಲಿ ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಶಿವನಂಜಪ್ಪ :— ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರದಲ್ಲಿ ಕೆ.ಜಿ. ಟೆಂಪಲ್ ಮತ್ತು ನಿಟ್ಟೂರುಗಳಲ್ಲಿ ಈಗಾಗಲೇ ಉಪ ಮಾರುಕಟ್ಟೆಗಳನ್ನು ಸ್ಥಾಪನೆ

ಮಾಡಲಾಗಿದೆ ಎಂದು ಹೇಳಿದ್ದಾರೆ. ಅದು ಹೇಗೆ ಮತ್ತು ಅಭಿವೃದ್ಧಿಪಡಿಸಲಾಗುತ್ತದೆ ಎಂದು ಹೇಳಿದ್ದೀರಿ, ಏನು ಅಭಿವೃದ್ಧಿಪಡಿಸುತ್ತಿದ್ದೀರಿ? ಎರಡನೆಯದಾಗಿ ಕಲ್ಲೂರು ಕ್ರಾಸ್‌ನಲ್ಲಿ ಗ್ರಾಮೀಣ ಮಾರುಕಟ್ಟೆಯನ್ನು (ಸಂತೆ) ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗಿದೆ, ಎಂದು ಹೇಳಿದ್ದೀರಿ. ಏನು ಕ್ರಮ ಜರುಗಿಸಲಾಗಿದೆ? ಮೂರನೆಯದಾಗಿ, ಮಾವಿನ ಹಳ್ಳಿಗ್ರಾಮದ ಉಪ ಮಾರುಕಟ್ಟೆ ಸ್ಥಾಪನೆ ಬಗ್ಗೆ ಸರ್ಕಾರಕ್ಕೆ ಮನವಿ ಬಂದಿರುವುದಿಲ್ಲವೆಂದು ಹೇಳಿದ್ದೀರಿ. ಹಿಂದೆ ಮಂತ್ರಿಗಳಾಗಿದ್ದಂತಹ ಶ್ರೀರಾಮಲಿಂಗಾರೆಡ್ಡಿಯವರು ಆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು. ಆಗ ನಾನು ಮತ್ತು ಸಾರ್ವಜನಿಕರು ಸೇರಿ ಡಿಮ್ಯಾಂಡ್ ಮಾಡಿದ್ದೆವು. ನಾವು ಅರ್ಜಿಯನ್ನು ಕೊಟ್ಟಿದ್ದೇವೆ, ಮತ್ತು ಪತ್ರವನ್ನು ಬರೆದಿದ್ದೇವೆ. ತಾವು ಇದರ ಬಗ್ಗೆ ಏನು ಮಾಡುತ್ತೀರೆಂದು ತಿಳಿಸಬೇಕು.

ಶ್ರೀ ಹೆಚ್. ನಾಗಪ್ಪ :— ಮಾನ್ಯ ಅಧ್ಯಕ್ಷರೆ, ಕೆ.ಜಿ. ಟಿಂಪಲ್‌ನಲ್ಲಿ ಈಗಾಗಲೇ ಮಾರುಕಟ್ಟೆಯನ್ನು ಮಾಡಿ 3 ಎಕರೆ ಜಮೀನನ್ನು ವಶಕ್ಕೆ ತೆಗೆದುಕೊಂಡಿದ್ದೇವೆ. ಮತ್ತೆ ಅಭಿವೃದ್ಧಿಕಾರ್ಯಕ್ಕಾಗಿ ಸುಮಾರು 7 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅದೇ ರೀತಿಯಲ್ಲಿ ನಿಟ್ಟೂರು ಉಪ ಮಾರುಕಟ್ಟೆಗೂ ಕೂಡ 10 ಎಕರೆ 27 ಸೆಂಟ್ ಜಾಗವನ್ನು ಕೂಡ ಅಕ್ವಾಯರ್ ಮಾಡಿಕೊಂಡು ಸುಮಾರು 22 ಲಕ್ಷ ರೂಪಾಯಿಗಳಲ್ಲಿ ಪ್ರಾಂಗಣದ ಸಮತಟ್ಟು ಮಾಡುವುದು. ಅದೇ ರೀತಿ ನಿಟ್ಟೂರು ಉಪ ಮಾರುಕಟ್ಟೆಯನ್ನು ಕೂಡ ಸುಮಾರು ಹತ್ತು ಎಕರೆ, ಇಪ್ಪತ್ತೇಳು ಸೆಂಟ್ ಜಾಗವನ್ನು ಸ್ವಾಧೀನಪಡಿಸಿಕೊಂಡು ಪ್ರಾಂಗಣವನ್ನು ಸಮತಟ್ಟು ಮಾಡುವುದು ಮತ್ತು ಜಂಗಲ್ ಕ್ಲಿಯರ್ ಮಾಡುವುದು, ಕಾಂಪೌಂಡ್ ಕಟ್ಟಿಸುವುದು, ರಸ್ತೆಗಳ ಅಭಿವೃದ್ಧಿ, ಹರಾಜುಕಟ್ಟೆ ನಿರ್ಮಾಣ, ನೀರು ಸರಬರಾಜು ಇವುಗಳಿಗೋಸ್ಕರವಾಗಿ ಸುಮಾರು ಇಪ್ಪತ್ತೆರಡು ಲಕ್ಷ ರೂಪಾಯಿಗಳನ್ನು ಈಗ ಖರ್ಚು ಮಾಡುತ್ತಿದ್ದೇವೆ. ಅದೇರೀತಿ ಕಲ್ಲೂರು ಕ್ರಾಸ್‌ನಲ್ಲೂ ಕೂಡ ಗ್ರಾಮೀಣ ಸಂತೆಯನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರವಾಗಿ ಅಲ್ಲಿಯ ಪಂಚಾಯಿತಿಯವರಿಂದ ಒಂದು ನಿವೇಶನವನ್ನೂ ಕೂಡ ಕೇಳಿದ್ದೇವೆ, ಸುಮಾರು 150 ಮತ್ತು 500 ಅಡಿ ಜಾಗವನ್ನು ಅವರು ಕೊಟ್ಟಿದ್ದಾರೆ ಅದರಲ್ಲಿ ನಾಲ್ಕು ಲಕ್ಷ ಎಪ್ಪತ್ತ ಮೂರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಆ ಸಂತೆಯ ಅಭಿವೃದ್ಧಿ ಕಾರ್ಯಗಳನ್ನು ಕೂಡ ತೆಗೆದುಕೊಳ್ಳುತ್ತೇವೆ. ಮತ್ತೆ ಮಾವಿನಹಳ್ಳಿಯಲ್ಲಿ ಯಾವುದೇ ಉಪ ಮಾರುಕಟ್ಟೆಯ ಸ್ಥಾಪನೆಗೆ ಪ್ರಸ್ತಾವನೆ ಬಂದಿಲ್ಲ, ಅದನ್ನು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ :— ಹಿಂದೆ, ಈ ಇಲಾಖೆಗೆ ಮಂತ್ರಿಗಳಾಗಿದ್ದಾಗ ರಾಮಲಿಂಗಾರೆಡ್ಡಿಯವರು ಸ್ಥಳಕ್ಕೆ ಬಂದಾಗ, ನಾನು ಕಾಗದವನ್ನು ಕೊಟ್ಟು ಆ ಊರಿನ ಜನ ಒತ್ತಾಯ ಮಾಡಿದ್ದರು, ಊರಿನವರೂ ಕೂಡ ಮಂತ್ರಿಗಳಿಗೆ ರೆಪ್ರಸೆಂಟೇಷನ್ ಮಾಡಿದ್ದಾರೆ. ಅದನ್ನು ಈಗಲಾದರೂ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಹೆಚ್. ನಾಗಪ್ಪ :— ಸಭಾಧ್ಯಕ್ಷರೆ, ಇತ್ತೀಚೆಗೆ ಅವರೇನಾದರೂ ರೆಪ್ರಸೆಂಟೇಷನ್ ಕೊಟ್ಟಿರುವುದು ಇದ್ದರೆ, ನಾನು ಹುಡುಕಿಸಿ ಆ ಕಡತವನ್ನು ತೆಗೆಸುತ್ತೇನೆ. ಇಲ್ಲದಿದ್ದರೆ, ಅದನ್ನು ಅಭಿವೃದ್ಧಿಪಡಿಸುವುದಕ್ಕೆ ನಾವು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ಸ್ಟೇಟ್ ಅಗ್ರೋಕಾರ್ನ್ ಪ್ರಾಡಕ್ಟ್ಸ್, ಲಿ. ಇದರಲ್ಲಿ ಭ್ರಷ್ಟಾಚಾರ.

56(96) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರ ಸ್ವಾಮ್ಯದ ಕರ್ನಾಟಕ ಸ್ಟೇಟ್ ಅಗ್ರೋಕಾರನ್ ಪ್ರಾಡಕ್ಟ್ಸ್, ಸಂಸ್ಥೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಪ್ರಕರಣವು ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ ಯಾವ ದಿನಾಂಕದಿಂದ ಬಂದಿದೆ, ಈ ಪ್ರಕರಣವನ್ನು ಸಿಓಡಿ ತನಿಖೆಗೆ ಒಪ್ಪಿಸಲಾಗಿದೆಯೇ ಸಿ.ಓಡಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ (ಸಲ್ಲಿಸಿದ್ದರೇ ವರದಿಯ ಪೂರ್ಣ ವಿವರ ನೀಡುವುದು.)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :—

ಅ) ಹಿಂದಿನ ವ್ಯವಸ್ಥಾಪಕ ನಿರ್ದೇಶಕರು ಡಾ: ಎಂ.ಎಸ್. ಪಾರ್ಥಸಾರಥಿ ಮೇಲೆ ಭ್ರಷ್ಟಾಚಾರ ಅಕ್ರಮ ವ್ಯವಹಾರ ಮತ್ತು ಆಡಳಿತ ಲೋಪಗಳ ಬಗ್ಗೆ ದೂರುಗಳು ಸರ್ಕಾರದಲ್ಲಿ ಸ್ವೀಕೃತವಾಗಿವೆ.

ಆ) ಈ ಬಗ್ಗೆ ದೂರುಗಳನ್ನು ಜುಲೈ 1998ರಲ್ಲಿ ಸ್ವೀಕರಿಸಿದ್ದು, ಹಿಂದಿನ ವ್ಯವಸ್ಥಾಪಕ ನಿರ್ದೇಶಕರನ್ನು ವಿಚಾರಣೆ ಬಾಕಿ ಇಟ್ಟು ಅಮಾನತ್ತಿನಲ್ಲಿಡಲಾಗಿದೆ, ನಂತರ ಪ್ರಕರಣವನ್ನು ತನಿಖೆ ನಡೆಸಲು ಸಿ.ಓ.ಡಿ.ಗೆ ಒಪ್ಪಿಸಲಾಗಿದೆ. ಸಿ.ಓ.ಡಿಯಿಂದ ತನಿಖಾ ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಸಭಾಧ್ಯಕ್ಷರೆ, ಉತ್ತರದಲ್ಲಿ ಜುಲೈ 98ರಂದು ದೂರುಗಳನ್ನು ಸ್ವೀಕರಿಸಿದ್ದು ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿಚಾರಣೆ ಬಾಕಿ ಇದ್ದು, ಅಮಾನತ್ತಿನಲ್ಲಿಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ನಾನು ಕೃಷಿ ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ನೀವೂ ಕೂಡ ಇಲ್ಲಿ ಅನೇಕ ಹಗರಣಗಳನ್ನು ಪ್ರಸ್ತಾಪ ಮಾಡಿದ್ದೀರಿ, ಸರ್ಕಾರದ ವ್ಯವಸ್ಥೆಯನ್ನು ಸರಿಮಾಡಬೇಕೆಂದು ಪ್ರಯತ್ನಿಸಿದ್ದೀರಿ. ಇವತ್ತು ನಿಮ್ಮ ಮುಂದೆ ಸುಮಾರು 1997-98ನೇ ಇಸವಿನಲ್ಲಿ ನಾಲ್ಕೂವರೆ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿದೆ ಎನ್ನುವ ದೂರು ಬಂದಿದೆ. ಏನೇನು ಎಂದರೆ